ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ದಿನಾಂಕಃ 23/*06/*2025

**<u>ಮುಂದುವರೆದ ಪಾಟೀ ಸವಾಲುಃ ಶ್ರೀ ಎ ಎಸ್ ವಕೀಲರಿಂದಃ</u>**

ನಾನು ನಿ ಪಿ 4 ನ್ನು ಓದಿ ಒಪ್ಪಿ ಹಾಜರಿಸಿದ್ದೇನೆ. ನಿ ಪಿ 4 ರಲ್ಲಿ ದಾವಾ ಸ್ವತ್ತು ಎಲ್ಲಿ ಬರುತ್ತದೆ ಎಂಬುದನ್ನು ತಿಳಿದು ಮತ್ತು ಅದನ್ನು ಸಂಪೂರ್ಣವಾಗಿ ಒಪ್ಪಿಯೇ ಹಾಜರುಪಡಿಸಿರುತ್ತೇನೆ. ದಾವಾ ಹಾಕಿದ ನಂತರ ವಾದಿಯು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಯಾವೆಲ್ಲ ವ್ಯವಹಾರಗಳನ್ನು ಮಾಡಿದ್ದಾರೆಂದು ನನಗೆ ಗೊತ್ತಿದೆ. ನನಗೆ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಾದಿಯು ದಾವಾ ಸ್ವತ್ತನ್ನು ಅನ್ಯ ಸಂಕ್ರಮಣ ಮಾಡಿರುವ ವಿಷಯ ನನಗೆ ತಿಳಿದಿಲ್ಲ. ನಾನು ಎಸ್ ಎಸ್ ಎಲ್ ಸಿ ಓದಿರುತ್ತೇನೆ ಮತ್ತು ಕನ್ನಡ ಓದಲು ಬರೆಯಲು ಬರುತ್ತದೆ. ಸಾಕ್ಷಿಗೆ ದಿನಾಂಕ 30.10.2015 ರ ಅಧೀಕೃತ ಜ್ಞಾಪನದ ದೃಡೀಕೃತ ಪ್ರತಿಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಒಪ್ಪಿದ್ದರಿಂದ ನಿ ಡಿ -1 ಎಂದು ಗುರುತಿಸಲಾಯಿತು. ಸಾಕ್ಷಿ ನಿ ಡಿ 1 ರಲ್ಲಿರುವ ಆಸ್ತಿಯ ಚೆಕ್ ಬಂಧಿಯನ್ನು ಪೂರ್ವಕ್ಕೆ ಲಾ ಹಿ -9, ಪಶ್ಚಿಮಕ್ಕೆ ಲಾ ಹಿ -2, ಉತ್ತರಕ್ಕೆ ಲಾ ಹಿ - 11 ಮತ್ತು ದಕ್ಷಿಣಕ್ಕೆ ರಸ್ತೆ ಇದೆ ಎನ್ನುತ್ತಾರೆ.

2. ವಾದಿಯು ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಹೊಂದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದೇ ಆಸ್ತಿಯನ್ನು ಅನ್ಯ ಸಂಕ್ರಮಣ ಮಾಡುವಾಗ ಸ್ಥಳ ತನಿಖೆ ಮಾಡುವ ವಿಚಾರ ನನಗೆ ತಿಳಿದಿರುತ್ತದೆ. ನಾನು ಸಾಕ್ಷಿ ಹೇಳುವ ಪೂರ್ವದಲ್ಲಿ ವಾದಿಯಿಂದ ದಾವಾ ಸ್ವತ್ತಿಗೆ ಸಂಬಂಧಿಸಿರುವ ಮೂಲ ನಕಾಶೆ ಮತ್ತು ಇನ್ನಿತರ ದಾಖಲಾತಿಗಳನ್ನು ಕೇಳಿ ಪಡೆದಿಲ್ಲ. ಸದರಿ ಪ್ರತಿವಾದಿಯ ಮೇಲೆ ಆನಂದ್ ಎಂಬುವವರು ದಾವೆಯನ್ನು ದಾಖಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯು ವಯೋಸಹಜ ಖಾಯಿಲೆಯಿಂದ ಬಳಲುತ್ತಿದ್ದರು. ವಾದಿಯ ಮಕ್ಕಳಲ್ಲಿ ಮೊಹಮ್ಮದ್ ಹುಸೇನ್ ಪುರಸಭೆಯಲ್ಲಿ ಕೆಲಸದಲ್ಲಿರುತ್ತಾರೆ, ಆದರೆ ಎಷ್ಟು ವರ್ಷಗಳಿಂದ ಎಂದು ಗೊತ್ತಿಲ್ಲ ಮತ್ತು ಅವರು ಪರವಾನಗಿ ವಿಭಾಗದಲ್ಲಿ ಕೆಲಸಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮತ್ತೊಬ್ಬರು ಆಟೋಚಾಲಕರಾಗಿ ಕೆಲಸ ಮಾಡುತ್ತಿದ್ದು ಇನ್ನುಳಿದ ಮಕ್ಕಳು ಹಾಸನದಲ್ಲಿ ವ್ಯಾಪಾರ ಮಾಡುತ್ತಾರೆ ಮತ್ತು ಹೆಣ್ಣುಮಕ್ಕಳಲ್ಲಿ ಒಬ್ಬರು ಮೈಸೂರಿನಲ್ಲಿದ್ದು ಮತ್ತೊಬ್ಬರು ಭದ್ರಾವತಿಯಲ್ಲಿರುತ್ತಾರೆ. ವಾದಿಯು ಭದ್ರಾವತಿಯಲ್ಲಿ ಇದ್ದರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಹೊಳೆನರಸೀಪುರ, ಭದ್ರಾವತಿಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ನಿ ಪಿ 18 ರಿಂದ 20 ರಲ್ಲಿರುವ ಪೋಟೋಗಳನ್ನು ಸಾಕ್ಷಿಗೆ ತೋರಿಸಲಾಗಿ ದಾವೆಯನ್ನು ಹೂಡುವ ಸಂದರ್ಬದಲ್ಲಿ ಸದರಿ ಜಮೀನಿನಲ್ಲಿ ಪ್ರತಿವಾದಿಗಳು ಮನೆಯನ್ನು ನಿರ್ಮಾಣ ಮಾಡಿದ್ದರು ಎಂದರೆ ಸರಿ.

3. ಪ್ರತಿವಾದಿಯು ನಿ ಪಿ 15 ರ ಪ್ರಕಾರ ರೂಪಿತ ಯೋಜನೆ ಪ್ರಕಾರ ನಿ ಪಿ 17 ಪರವಾನಗಿ ಪಡೆದು ಮನೆ ನಿರ್ಮಾಣ ಮಾಡಿದ್ದಾರೆ ಎಂದರೆ ಸರಿ ಸಾಕ್ಷಿಯು ಮುಂದುವರೆದು ಅವರು ವಾದಿಯ ಜಮೀನಿನಲ್ಲಿ ಮನೆ ನಿರ್ಮಾಣ ಮಾಡಿದ್ದಾರೆ ಎನ್ನುತ್ತಾರೆ.

4. ನನ್ನ ಮುಖ್ಯ ಪ್ರಮಾಣ ಪತ್ರಿಕೆಯಲ್ಲಿರುವ ಎರಡನೇ ಪುಟದ ಎರಡನೆಯ ಖಂಡಿಕೆಯಲ್ಲಿ ನಮೂದಿಸಿರುವ ಕೇವಿಯೇಟ್ ನ ಬಗ್ಗೆ ನಾನು ಯಾವುದೇ ಮಾಹಿತಿ ಪಡೆದಿಲ್ಲ ಎಂದರೆ ಸರಿ. ಸದರಿ ವಿಷಯವನ್ನು ವಾದಿಯೇ ವಕೀಲರ ಕಛೇರಿಯಲ್ಲಿ ಹೇಳಿ ಬರೆಸಿರುತ್ತಾರೆ ಎಂದರೆ ಸರಿ. ಸದರಿ ಸಮಯಲ್ಲಿ ವಾದಿಯು ಆರೋಗ್ಯವಾಗಿರಲಿಲ್ಲ.

5.ವಾದಿಯು ದಾವಾ ಆಸ್ತಿಯ ಮಾಲೀಕರಲ್ಲ ಮತ್ತು ಅವರು ದಾವಾ ಆಸ್ತಿಯ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ವಾದಿಯು ಆರೋಗ್ಯವಾಗಿದ್ದು ಈ ದಾವೆಯ ಯಾವ ಮಾಹಿತಿಯು ಇಲ್ಲದ ನನ್ನನ್ನು ಪ್ರತಿವಾದಿಗೆ ತೊಂದರೆ ನೀಡಲು ಸದರಿ ದಾವೆಯನ್ನು ಹೂಡಿದ್ದಾರೆ ಎಂದರೆ ಸರಿಯಲ್ಲ. ವಾದಿಯ ಮಗನಿಂದ ಈ ದಾವೆಯಲ್ಲಿ ಸಾಕ್ಷಿ ನುಡಿಸಿದರೆ ನಿಜಾಂಶಗಳು ಬೆಳಕಿಗೆ ಬರುತ್ತವೆ ಆದ್ದರಿಂದ ಅವರ ಬದಲು ನಾನು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಅನುಕೂಲಕ್ಕೆ ದಾವಾ ಆಸ್ತಿಯ ಚೆಕ್ ಬಂಧಿಗಳನ್ನು ಸಮಯಕ್ಕೆ ತಕ್ಕಂತೆ ಬದಲಾಯಿಸಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

**ಪಾಟೀಸವಾಲು ಮುಕ್ತಾಯಃ**

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಓ**

**ಸಿವಿಲ್ ಜಡ್ಜ್ ಮತ್ತು ಜೆ ಎಮ್ ಎಫ್ ಸಿ,**
**ಹೊಳೆನರಸೀಪುರ**